63524

V Semester B.Com. Examination, April/May 2023
(CBCS) (F+R)
COMMERCE
Paper – 5.4 : Costing Methods

Time : 3 Hours Max. Marks : 70

***Instructions :*** *Answer should be written completely either in* ***English*** *or in* ***Kannada****.*

SECTION – A
ವಿಭಾಗ - ಎ

1. Answer **any five** sub-questions from the following **each** correct answer carries **two** marks. **(5×2=10)**
ಯಾವುದಾದರೂ ಐದು ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು.

a) What is operating costing ?
ಕಾರ್ಯವೆಚ್ಚದ ಅರ್ಥವನ್ನು ನೀಡಿ.

b) What is meant by retention money ?
ಧಾರಣ ಹಣ ಎಂದರೇನು ?

c) Name any two cost units in transport costing.
ಸಾರಿಗೆ ವೆಚ್ಚದಲ್ಲಿ ಯಾವುದಾದರೂ ಎರಡು ವೆಚ್ಚದ ಘಟಕಗಳನ್ನು ಬರೆಯಿರಿ.

d) What is abnormal gain ?
ಅಸಾಮಾನ್ಯ ಲಾಭ ಎಂದರೇನು ?

e) State any 4 industries, where process costing is applicable.
ಪ್ರಕ್ರಿಯೆ ವೆಚ್ಚ ನಿರ್ಣಯ ಪದ್ಧತಿಯನ್ನು ಅಳವಡಿಸಿರುವ ಯಾವುದಾದರೂ ನಾಲ್ಕು ಕಾರ್ಖಾನೆಗಳನ್ನು ಹೆಸರಿಸಿ.

SHRI BHAGAWAN MAHAVEER JAIN COLLEGE KGF - 563 122

P.T.O.

f) What do you mean by escalation clause in contract ?

ಒಪ್ಪಂದಗಳಲ್ಲಿ ಹೆಚ್ಚಳದ ಷರತ್ತು ಎಂದರೇನು ?

g) Mention any four features of job costing.

ಬಿಡಿ ಕೆಲಸ ವೆಚ್ಚ ನಿರ್ಣಯದ ನಾಲ್ಕು ಲಕ್ಷಣಗಳನ್ನು ತಿಳಿಸಿ.

## SECTION – B

## ವಿಭಾಗ - ಬಿ

Answer **any three** of the following. **Each** question carries **six** marks. **(3×6=18)**

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೆ **ಆರು** ಅಂಕಗಳು.

2. Calculate economic batch quantity and number of batches from the following :

| | | |
|---|---|---|
| Annual consumption | – | 125000 units |
| Set-up cost per batch | – | ₹ 125 |
| Cost of manufacture | – | ₹ 25 p.u. |
| Rate of interest | – | 12% |
| Carrying cost | – | 60 paisa per unit, per annum. |

ಕೆಳಗಿನವುಗಳಿಂದ ಆರ್ಥಿಕ ಬ್ಯಾಚ್ ಪರಿಮಾಣವನ್ನು ಮತ್ತು ಬ್ಯಾಚ್‌ಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

| | | |
|---|---|---|
| ವಾರ್ಷಿಕ ಬೇಡಿಕೆ | - | 125000 ಯುನಿಟ್‌ಗಳು |
| ಸಿದ್ಧಪಡಿಸುವ ವೆಚ್ಚಗಳು | - | ರೂ. 125 |
| ಉತ್ಪಾದನಾ ವೆಚ್ಚ | - | ರೂ. 25 ಪ್ರತಿ ಯುನಿಟ್‌ಗೆ |
| ಬಡ್ಡಿ ದರ (ಶೇಕಡಾ) | - | 12% |
| ಸಾಗಣೆ ವೆಚ್ಚ | - | 60 ಪೈಸೆ ಪ್ರತಿ ಯುನಿಟ್‌ಗೆ (P.A.) |

3. Explain any 3 methods of costing.

ವೆಚ್ಚ ನಿರ್ಣಯಶಾಸ್ತ್ರದ ಯಾವುದಾದರೂ ಮೂರು ವಿಧಾನಗಳನ್ನು ವಿವರಿಸಿ.

4. In processing a basic raw material, three joint products X, Y and Z are produced.

The joint expenses of manufacturing are :

| | |
|---|---|
| Material | ₹ 5,000 |
| Labour | ₹ 4,000 |
| Overheads | ₹ 4,500 |
| | **13,500** |

Subsequent expenses are as follows :

| **Particulars** | **X (₹)** | **Y (₹)** | **Z (₹)** |
|---|---|---|---|
| Materials | 1,000 | 800 | 900 |
| Labour | 1,250 | 700 | 850 |
| Overhead | 1,250 | 500 | 750 |
| | **3,500** | **2,000** | **2,500** |
| Sales value | 21,000 | 10,000 | 9,000 |
| Estimated profit on sales | 50% | 50% | 33.33% |

Show how you would apportion the joint costs of manufacture by reverse cost method.

ಒಂದು ಉತ್ಪಾದನಾ ಸಂಸ್ಥೆಯಲ್ಲಿ ಮೂಲ ಸಾಮಗ್ರಿಯನ್ನು ಪ್ರಕ್ರಯಿಸುವಾಗ ಮೂರು ಸಹ ಪದಾರ್ಥಗಳಾದ ಎಕ್ಸ್, ವೈ ಮತ್ತು ಝಡ್ ಉತ್ಪತ್ತಿಯಾಗಿರುತ್ತದೆ. ಇದರ ಜಂಟಿ ಖರ್ಚಿನ ವಿವರ.

| | |
|---|---|
| ಸಾಮಗ್ರಿಗಳು | ರೂ. 5,000 |
| ಶ್ರಮ | ರೂ. 4,000 |
| ಮೇಲುವೆಚ್ಚ | ರೂ. 4,500 |
| | **13,500** |

ತರುವಾಯ ತಗುಲಿದ ವೆಚ್ಚ :

| ವಿವರಗಳು | ಎಕ್ಸ್ (ರೂ.) | ವೈ (ರೂ.) | ಝಡ್ (ರೂ.) |
|---|---|---|---|
| ಸಾಮಗ್ರಿಗಳು | 1,000 | 800 | 900 |
| ಶ್ರಮ | 1,250 | 700 | 850 |
| ಮೇಲುವೆಚ್ಚ | 1,250 | 500 | 750 |
| | **3,500** | **2,000** | **2,500** |
| ಮಾರಾಟದ ಬೆಲೆ | 21,000 | 10,000 | 9,000 |
| ಮಾರಾಟದ ಬೆಲೆಯ ಮೇಲಿನ ಅಂದಾಜು ಲಾಭ | 50% | 50% | 33.33% |

ತಿರುಗಿಸಿ ಬರೆಯುವ ಖರ್ಚು ವಿಧಾನವನ್ನು ಅಳವಡಿಸಿ ಮೂರು ಪದಾರ್ಥಗಳ ಜಂಟಿ ಖರ್ಚಿನ ವಿಭಾಗೀಕರಣ ಮಾಡುವ ಒಂದು ಪಟ್ಟಿಯನ್ನು ತಯಾರಿಸಿ.

5. Varsha transport company is running 3 buses between two cities which are 80 kms apart. The seating capacity of each bus is 50 passengers. The actual passengers carried were 70% of the capacity. Each bus makes one round trip per day. All the buses run on all the days of the month of September.

Find – what is the kms of total passengers in the month of September.

ವರ್ಷಾ ಸಂಸ್ಥೆ ಮೂರು ಬಸ್ಸುಗಳನ್ನು ಎರಡು ನಗರಗಳ ನಡುವೆ ಓಡಿಸುತ್ತಿದೆ. ಎರಡು ನಗರಗಳ ನಡುವಿನ ಅಂತರ 80 ಕಿ.ಮೀ. 50 ಮಂದಿ ಪ್ರಯಾಣಿಕರಿಗೆ ಅವಕಾಶವಿರುವ ಈ ಬಸ್ಸುಗಳ ನಿಜವಾದ ಅವಕಾಶದ ಶೇ. 70ರಷ್ಟು ಪ್ರಯಾಣಿಕರನ್ನು ಒಯ್ಯುತ್ತದೆ.

ಪ್ರತಿ ಬಸ್ಸು ಪ್ರತಿ ನಿತ್ಯ ಎರಡು ನಗರಗಳ ನಡುವೆ ಒಂದು ಸುತ್ತು ಹೋಗಿ ಬರುತ್ತದೆ. ಎಲ್ಲಾ ಬಸ್ಸುಗಳು ತಿಂಗಳ ಎಲ್ಲಾ ದಿನವು ಓಡಿವೆ.

ಸೆಪ್ಟೆಂಬರ್ ಮಾಹೆಯಲ್ಲಿ ಒಟ್ಟು ಪ್ರಯಾಣಿಕರ ಕಿ.ಮೀ. ಎಷ್ಟೆಂದು ಕಂಡುಹಿಡಿಯಿರಿ.

6. The following particulars relate to a certain contract carried out during the year ended 31-3-2022.

| Particulars | in (₹) |
|---|---|
| Work certified | 42,900 |
| Materials sent to site | 19,350 |
| Cash received from contractee | 39,000 |
| Labour | 16,980 |
| Contract price | 60,000 |
| Materials returned to stores | 120 |
| Materials on hand at the end | 420 |
| Direct expenditure | 780 |
| Establishment charges | 975 |
| Cost of work not yet certified | 1,020 |
| Plant installed at site | 3,390 |
| Value of the plant at the end | 2,460 |

Prepare contract account for the year ended 31-3-2022.

ಈ ಕೆಳಕಂಡ ಮಾಹಿತಿಯು ಒಂದು ಗುತ್ತಿಗೆ ಕೆಲಸದ 31/3/2022ರ ವಾರ್ಷಿಕ ಅವಧಿ ಅಂತ್ಯಕ್ಕೆ ಸಂಬಂಧಿಸಿದೆ.

| ವಿವರಗಳು | (ರೂ.ಗಳಲ್ಲಿ) |
|---|---|
| ದೃಢೀಕರಿಸಿದ ಕೆಲಸ | 42,900 |
| ಸ್ಥಳಕ್ಕೆ ಕಳುಹಿಸಿದ ಸಾಮಗ್ರಿಗಳು | 19,350 |
| ಗುತ್ತಿಗೆ ನೀಡಿದವರಿಂದ ಪಡೆದ ಹಣ | 39,000 |
| ಶ್ರಮ | 16,980 |
| ಗುತ್ತಿಗೆ ಬೆಲೆ | 60,000 |
| ಉಗ್ರಾಣಕ್ಕೆ ಹಿಂತಿರುಗಿಸಿದ ಸಾಮಗ್ರಿಗಳು | 120 |
| ಅಂತ್ಯದಲ್ಲಿರುವ ಸಾಮಗ್ರಿಗಳು | 420 |
| ನೇರ ಖರ್ಚು | 780 |
| ಸ್ಥಾಪನಾ ಖರ್ಚು | 975 |
| ದೃಢೀಕರಿಸದ ಕೆಲಸ | 1,020 |
| ಸ್ಥಳದಲ್ಲಿ ಸ್ಥಾವರ ಜೋಡಣೆ | 3,390 |
| ಅಂತ್ಯದಲ್ಲಿನ ಸ್ಥಾವರ ಬೆಲೆ | 2,460 |

31/3/2022ರ ವರ್ಷಾಂತ್ಯಕ್ಕೆ ಗುತ್ತಿಗೆ ಖಾತೆ ತಯಾರಿಸಿ.

## SECTION – C

## ವಿಭಾಗ – ಸಿ

Answer **any three** questions. **Each** question carries **14** marks. **(3×14=4**

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು.

7. Thanuja Co. undertook a contract for ₹ 15,00,000 on an arrangement that 80% of the value of work done as certified by the architects of the contractee, should be paid immediately and the remaining 20% be retained until the contract is completed.

In 2020, the amounts expended were; Materials ₹ 1,80,000; Wages ₹ 1,70,000; Carriage ₹ 6,000; Cartage ₹ 1,000; Sundry expenses ₹ 3,000. The work was certified for ₹ 3,75,000 and 80% of this was paid as agreed.

In 2021, the amounts expended were : Materials ₹ 2,20,000, Wages ₹ 2,30,000, Carriage ₹ 23,000, Cartage ₹ 2,000; Sundry expenses ₹ 4,000. Three-fourths (¾) of the contract was certified as completed by 31st December, 2021 and 80% of this received accordingly. The value of work uncertified was ascertained at ₹ 20,000.

In 2022, the amounts expended were : Materials ₹ 1,26,000; Wages ₹ 1,70,000; Cartage ₹ 6,000; Sundry expenses ₹ 3,000, and on 30th June the whole contract was completed.

Show how the Contract Account and also the Contractee's Account would appear for each of these three years in the books of the contractor, assuming that balance due to him was received on completion of the contract.

ತನುಜ ಕಂಪನಿಯು ರೂ. 15,00,000ಕ್ಕೆ ಒಂದು ಗುತ್ತಿಗೆಯನ್ನು ತೆಗೆದುಕೊಂಡಿದೆ ಗುತ್ತಿಗೆಯ ಒಪ್ಪಂದದ ಪ್ರಕಾರ ದೃಢೀಕರಿಸಿದ ಕೆಲಸದ ಶೇ. 80ರಷ್ಟನ್ನು ಕೂಡಲೇ ಗುತ್ತಿಗೆದಾರನಿಗೆ ನಗದು ರೂಪದಲ್ಲಿ ಪಾವತಿ ಮಾಡಬೇಕಾಗಿರುತ್ತದೆ. ಉಳಿದ 20% ರಷ್ಟನ್ನು ಗುತ್ತಿಗೆ ಪೂರ್ಣಗೊಳ್ಳುವವರೆಗೂ ಉಳಿಸಿಕೊಳ್ಳಲು ನಿರ್ಣಯಿಸಲಾಗಿದೆ.

2020ರಲ್ಲಿ ಗುತ್ತಿಗೆಗೆ ಸಂಬಂಧಿಸಿದ ಖರ್ಚುಗಳು; ಸಾಮಗ್ರಿಗಳು ರೂ. 1,80,000, ನೇರ ಕೂಲಿ ರೂ. 1,70,000, ಸಾಗಾಣಿಕೆ ರೂ. 6,000, ಬಂಡಿ ಬಾಡಿಗೆ ರೂ. 1,000, ಇತರೆ ಖರ್ಚುಗಳು ರೂ. 3,000, ದೃಢೀಕರಿಸಿದ ಕೆಲಸ ರೂ. 3,75,000 ಮತ್ತು ಇದರ ಶೇ. 80ರಷ್ಟನ್ನು ಒಪ್ಪಂದದಂತೆ ನಗದಾಗಿ ಪಾವತಿಸಲಾಗಿದೆ.

2021ರಲ್ಲಿ ಗುತ್ತಿಗೆಗೆ ಸಂಬಂಧಿಸಿದ ಖರ್ಚುಗಳು; ಸಾಮಗ್ರಿಗಳು ರೂ. 2,20,000, ಕೂಲಿ – 2,30,000, ಸಾಗಾಣಿಕೆ – ರೂ. 23,000, ಬಂಡಿ ಬಾಡಿಗೆ – ರೂ. 2,000, ಇತರೆ ಖರ್ಚುಗಳು – ರೂ. 4,000. 31 ಡಿಸೆಂಬರ್ 2021 ರಂದು ಗುತ್ತಿಗೆಯ ¾ರಷ್ಟು ಕೆಲಸವನ್ನು ದೃಢೀಕರಿಸಲಾಗಿದೆ ಮತ್ತು ಒಪ್ಪಂದದ ಪ್ರಕಾರ ಶೇ. 80ರಷ್ಟು ನಗದನ್ನು ಸ್ವೀಕರಿಸಲಾಗಿದೆ. ದೃಢೀಕರಿಸದ ಕೆಲಸ ರೂ. 20,000 ರಷ್ಟಿರುತ್ತದೆ.

2022ರಲ್ಲಿ ಖರ್ಚುಗಳು : ಸಾಮಗ್ರಿಗಳು ರೂ.1,26,000, ಕೂಲಿ – ರೂ.1,70,000, ಬಂಡಿ ಬಾಡಿಗೆ – ರೂ. 6,000, ಇತರೆ ಖರ್ಚುಗಳು – ರೂ. 3,000, ಜೂನ್ 30 ರಂದು ಗುತ್ತಿಗೆ ಪೂರ್ಣಗೊಂಡಿರುತ್ತದೆ.

ಮೇಲಿನ ಮಾಹಿತಿಗಳ ಆಧಾರದಿಂದ ಮೂರು ವರ್ಷಗಳಿಗೆ ಗುತ್ತಿಗೆ ಖಾತೆಯನ್ನು ಮತ್ತು ಗುತ್ತಿಗೆ ನೀಡಿದವರ ಖಾತೆಯನ್ನು ಕಂಡುಹಿಡಿಯಿರಿ.

8. The following details are extracted from the costing records of Theju Oil Refinery for the period ended 30 Sept. 2022.

Purchase of 500 tonnes of copra ₹ 8,80,000

| Particulars | Crushing Plant | Refinery Plant | Finishing |
|---|---|---|---|
| Cost of labour | 11,000 | 4,400 | 6,600 |
| Electric power | 2,640 | 1,584 | 1,056 |
| Sundry materials | 440 | 8,800 | – |
| Repairs to machinery and plant | 1,232 | 1,452 | 616 |
| Steam | 2,640 | 1,980 | 1,980 |
| Factory expenses | 5,808 | 2,904 | 968 |
| Cost of casks | – | – | 33,000 |

300 tonnes of crude oil was produced.

250 tonnes of oil was produced by refining process.

248 tonnes of refined oil was finished for delivery.

Copra sack sold ₹ 1,760.

175 tonnes of copra residue sold ₹ 48,400.

Loss in weight in crushing 25 tonnes.

45 tonnes by-product was obtained from refining process valued at ₹ 29,700.

You are required to show the accounts in respect of each of the following stages of manufacture for the purpose of arriving at the cost per tonne of each process and also the total cost per tonne of finished oil.

a) Copra crushing process

b) Refining process

c) Finishing process.

ತೇಜು ಕೊಬ್ಬರಿ ಎಣ್ಣೆ ಕಂಪನಿಯು 500 ಟನ್ ಕೊಬ್ಬರಿಯನ್ನು ರೂ. 8,80,000 ಖರೀದಿಸಿದೆ ಮತ್ತು ಅದರ ಪುಸ್ತಕದಿಂದ 31/09/2022ರ ಅಂತ್ಯಕ್ಕೆ ಕೆಳಕಂಡ ಮಾಹಿತಿಯನ್ನು ಪಡೆಯಲಾಗಿದೆ.

| ವಿವರಗಳು | ಕ್ರಷಿಂಗ್ ಪ್ರಕ್ರಿಯೆ | ಶುದ್ಧೀಕರಣ ಪ್ರಕ್ರಿಯೆ | ಮುಕ್ತಾಯ ಪ್ರಕ್ರಿಯೆ |
|---|---|---|---|
| ಕಾರ್ಮಿಕ ಮಜೂರಿ | 11,000 | 4,400 | 6,600 |
| ವಿದ್ಯುತ್ ಶಕ್ತಿ | 2,640 | 1,584 | 1,056 |
| ಇತರೆ ಸಾಮಗ್ರಿಗಳು | 440 | 8,800 | – |
| ಯಂತ್ರೋಪಕರಣಗಳ ದುರಸ್ತಿ | 1,232 | 1,452 | 616 |
| ಸ್ಟೀಮ್ | 2,640 | 1,980 | 1,980 |
| ಕಾರ್ಖಾನೆ ಖರ್ಚು | 5,808 | 2,904 | 968 |
| ಪೀಪಾಯಿ ಖರ್ಚು | – | – | 33,000 |

300 ಟನ್ ಕಚ್ಚಾತೈಲ ಉತ್ಪಾದಿಸಲಾಗಿದೆ. 250 ಟನ್ ಎಣ್ಣೆಯನ್ನು ಶುದ್ಧೀಕರಣ ಹಂತದಲ್ಲಿ ಉತ್ಪಾದಿಸಲಾಗಿದೆ.

248 ಟನ್ ಎಣ್ಣೆ ಮುಕ್ತಾಯದ ಹಂತದಿಂದ ಬಂದಿದೆ.

ಕೊಬ್ಬರಿ ಚೀಲ ಮಾರಾಟದಿಂದ ರೂ. 1,760 ಬಂದಿರುತ್ತದೆ.

175ಟನ್ ರಷ್ಟು ಕಚ್ಚಾ ಕೊಬ್ಬರಿ ಉಳಿಕೆಯನ್ನು ರೂ, 48,400ಕ್ಕೆ ಮಾರಲಾಗಿದೆ.

ಕ್ರಷಿಂಗ್ ಪ್ರಕ್ರಿಯೆಯಲ್ಲಿ ಆದ ತೂಕನಷ್ಟ 25 ಟನ್‌ಗಳು.

45 ಟನ್ ಉಪ-ವಸ್ತುಗಳನ್ನು ಶುದ್ಧೀಕರಣ ಪ್ರಕ್ರಿಯೆಯಿಂದ ಪಡೆಯಲಾಗಿದೆ ಇದರ ಮೊತ್ತ ರೂ. 29,700.

ಮೂರು ಪ್ರಕ್ರಿಯೆ ನಿರ್ಣಯ ಲೆಕ್ಕಗಳನ್ನು ತಯಾರಿಸಿ. ಪ್ರತಿ ಪ್ರಕ್ರಿಯೆ ಹಂತದಲ್ಲಿ ಒಂದು ಟನ್ ಉತ್ಪಾದನೆಗೆ ತಗಲುವ ವೆಚ್ಚ ಮತ್ತು ಮುಕ್ತಾಯ ಹಂತದಲ್ಲಿ ಪ್ರತಿ ಟನ್‌ಗೆ ತಗಲುವ ಒಟ್ಟು ವೆಚ್ಚವನ್ನು ತೋರಿಸಿರಿ.

ಎ) ಕ್ರಷಿಂಗ್ ಪ್ರಕ್ರಿಯೆ

ಬಿ) ಶುದ್ಧೀಕರಣ ಪ್ರಕ್ರಿಯೆ

ಸಿ) ಮುಕ್ತಾಯ ಪ್ರಕ್ರಿಯೆ.

9. Sandhya owns a bus which runs between Bangalore and Mysore and back for 10 days in a month. The distance between Bangalore and Mysore is 140 kms. The bus completes one round trip each day. The bus goes for another 10 days in the month Bangalore to Ananthpur. The distance between Bangalore and Ananthpur is 200 kms. The bus completes one round trip each day. For the rest 4 days of its operation in a month, it runs in the local city. The daily distance covered in the local trip is 60 kms. Calculate the rate, the person should charge, if he wants to earn a profit of 25% on his takings. The other details are as follows :

SRI BHAGAWAN MA... KGF

Cost of the bus ₹ 6,00,000

Depreciation 15% P.A.

Salary of the driver ₹ 4,000 P.M.

Salary of the conductor ₹ 3,000 P.M.

Accountant salary ₹ 1,800 P.M.

Insurance ₹ 12,000 P.A.

Diesel consumption 5 kms. per litre costing ₹ 40 per litre

Token tax ₹ 2,500 P.A.

Lubricant oil ₹ 10 for 50 kms.

Repairs and maintenance ₹ 5,000 P.M.

Permit fee ₹ 3,800 per 6 months

Normal capacity 50 passengers

The bus is generally occupied 80% of its capacity when it goes to Mysore and 90% incase of Ananthpur round trip. It is normally full when it runs with in the city.

ಸಂಧ್ಯಾ ಎಂಬ ಮಾಲೀಕರು ತನ್ನ ವಾಹನವನ್ನು ಬೆಂಗಳೂರು ಮತ್ತು ಮೈಸೂರು ನಡುವೆ ತಿಂಗಳಲ್ಲಿ ಹತ್ತು ದಿನ ಓಡಿಸುತ್ತಾರೆ. ಈ ನಗರಗಳ ನಡುವಿನ ಅಂತರ 140 ಕಿ.ಮೀ. ಹೋಗಿ ಬರುವುದು ಒಂದೇ ದಿನದಲ್ಲಿ ಮುಗಿಯುತ್ತದೆ. ಮುಂದಿನ ಹತ್ತು ದಿನಗಳು ಬೆಂಗಳೂರು ಮತ್ತು ಅನಂತಪುರ ನಡುವೆ ಓಡಾಡುತ್ತದೆ. ಈ ನಗರಗಳ ನಡುವಿನ ಅಂತರ 200 ಕಿ.ಮೀ. ಈ ಓಡಾಟ ಸಹಾ ಒಂದೇ ದಿನದಲ್ಲಿ ಮುಗಿಯುತ್ತದೆ. ಉಳಿದ ನಾಲ್ಕು ದಿನಗಳು ಬೆಂಗಳೂರಿನಲ್ಲಿ ನಗರ ಸಂಚಾರಕ್ಕೆ ಉಪಯೋಗಿಸಲಾಗಿದೆ. ನಗರ ಪ್ರದಕ್ಷಿಣೆಯಲ್ಲಿ ದಿನಕ್ಕೆ 60 ಕಿ.ಮೀ. ದೂರವನ್ನು ಸಂಚರಿಸಿದೆ.

ಈ ಕೆಳಗಿನ ವಿವರಗಳಿಂದ ಪ್ರತಿಯೊಬ್ಬ ಪ್ರಯಾಣಿಕನು ಪ್ರತಿ ಕಿ.ಮೀ. ಪ್ರಯಾಣಕ್ಕೆ ಕೊಡಬೇಕಾದ ದರವನ್ನು ಕಂಡುಹಿಡಿಯಿರಿ. ಶೇ. 25ರಷ್ಟು ಲಾಭಾಂಶವನ್ನು ದರದಲ್ಲಿ ಸೇರಿಸಬೇಕು.

ಬಸ್ ಮೌಲ್ಯ ರೂ. 6,00,000

ಸವಕಳಿ ಶೇ. 15 ವಾರ್ಷಿಕ

ಚಾಲಕನ ಸಂಬಳ ರೂ. 4,000 ತಿಂಗಳಿಗೆ

ನಿರ್ವಾಹಕನ ಸಂಬಳ ರೂ. 3,000 ತಿಂಗಳಿಗೆ

ಲೆಕ್ಕಾಧಿಕಾರಿಯ ಸಂಬಳ ರೂ. 1,800 ತಿಂಗಳಿಗೆ

ವಾರ್ಷಿಕ ವಿಮೆ ರೂ. 12,000

ಡೀಸೆಲ್ ಬಳಕೆ ಲೀ.ಗೆ 5 ಕಿ.ಮೀ.ನಂತೆ ಒಂದು ಲೀ.ನ ಬೆಲೆ ರೂ. 40

ಟೋಕನ್ ತೆರಿಗೆ ರೂ. 2,500 ವಾರ್ಷಿಕ

ಲ್ಯೂಬ್ರಿಕೆಂಟ್ ಎಣ್ಣೆ ರೂ. 10 ಪ್ರತಿ 50 ಕಿ.ಮೀ.ಗೆ

ರಿಪೇರಿ ಮತ್ತು ಸಂರಕ್ಷಣೆ ರೂ. 5,000 ತಿಂಗಳಿಗೆ

ಪರ್ಮಿಟ್ ಫೀಸ್ ರೂ. 3,800 ಪ್ರತಿ 6 ತಿಂಗಳಿಗೆ

ಬಸ್ಸಿನ ಸಾಮಾನ್ಯ ಸಾಮರ್ಥ್ಯ 50 ಪ್ರಯಾಣಿಕರು

ಮೈಸೂರಿಗೆ ಹೋಗಿ ಬರುವಾಗ ಶೇ. 80ರಷ್ಟು ಪ್ರಯಾಣಿಕರಿರುತ್ತಾರೆ. ಅನಂತಪುರಕ್ಕೆ ಹೋಗಿ ಬರುವಾಗ ಶೇ. 90ರಷ್ಟು ಪ್ರಯಾಣಿಕರಿರುತ್ತಾರೆ. ನಗರ ಪ್ರದಕ್ಷಿಣೆಯಲ್ಲಿ ಶೇ. 100ರಷ್ಟು ಪ್ರಯಾಣಿಕರಿರುತ್ತಾರೆ.

10. From the following details, you are required to calculate the cost of Job No. 222 and find out the price to give a profit of 25% on selling price.

Materials cost at ₹ 15,000

Direct wages :

a) Dept. P – 400 labour hours @ ₹ 10/hour

b) Dept. Q – 180 labour hours @ ₹ 6/hour

c) Dept. R – 100 labour hours @ ₹ 5/hour

Overhead expenses for three departments were estimated as follows :

Variable overheads :

Dept. P – ₹ 25,000 for 1000 labour hours

Dept. Q – ₹ 10,000 for 3000 labour hours

Dept. R – ₹ 10,000 for 1000 labour hours

Fixed overheads are estimated at ₹ 50,000 for 5000 normal working hours.

ಈ ಕೆಳಗಿನ ವಿಷಯಗಳಿಂದ ಬಿಡಿ ಕೆಲಸ ಸಂ. 222ರ ವೆಚ್ಚವನ್ನು ಕಂಡುಹಿಡಿಯಿರಿ ಮತ್ತು ಮಾರಾಟ ಬೆಲೆಯಲ್ಲಿ 25% ಲಾಭ ನೀಡುವಂತೆ ಬಿಡಿ ಕೆಲಸದ ಬೆಲೆಯನ್ನು ಕಂಡುಹಿಡಿಯಿರಿ.

ಸಾಮಗ್ರಿಗಳ ವೆಚ್ಚ ರೂ. 15,000

ನೇರ ಕೂಲಿಗಳು :

a) ವಿಭಾಗ P – 400 ಕೂಲಿ ಗಂಟೆಗಳು ಪ್ರತಿ ಗಂಟೆಗೆ ರೂ. 10

b) ವಿಭಾಗ Q – 180 ಕೂಲಿ ಗಂಟೆಗಳು ಪ್ರತಿ ಗಂಟೆಗೆ ರೂ. 6

c) ವಿಭಾಗ R – 100 ಕೂಲಿ ಗಂಟೆಗಳು ಪ್ರತಿ ಗಂಟೆಗೆ ರೂ. 5

ಮೂರು ವಿಭಾಗಗಳಿಗೆ ಊಹಿಸಲಾದ ಮೇಲ್ವೆಚ್ಚ ಕೆಳಕಂಡಂತಿದೆ :

ಬದಲಾಗುವ ಮೇಲು ವೆಚ್ಚಗಳು :

ವಿಭಾಗ P – 1000 ಕೂಲಿ ಗಂಟೆಗಳಿಗೆ ರೂ. 25,000

ವಿಭಾಗ Q – 3000 ಕೂಲಿ ಗಂಟೆಗಳಿಗೆ ರೂ. 10,000

ವಿಭಾಗ R – 1000 ಕೂಲಿ ಗಂಟೆಗಳಿಗೆ ರೂ. 10,000

ಅಂದಾಜು ಸ್ಥಿರ ಮೇಲುವೆಚ್ಚ ರೂ. 50,000 ಸಾಮಾನ್ಯ ಕೆಲಸದ ಗಂಟೆಗಳಿಗೆ ರೂ. 5,000.

11. a) From the following particulars related to Job No. 101 ascertain the total cost and estimated selling price.

Direct material ₹ 17,600

Direct labour ₹ 8,000

Works overheads are recovered on the basis of 50% of prime cost and administrative overhead 10% of works cost. A profit of 10% on total cost to be added.

b) Madhu company manufactures a product 5000 kgs, raw materials at ₹ 12 per kg were supplied to process-1. Labour cost amounted to ₹ 6,000 and production overhead incurred was ₹ 3,000. The normal loss was estimated at 5% and was sold at ₹ 3 per kg. Actual production in the process was 1860 kgs.

Prepare :

Process-1 account and ascertain the value of abnormal loss.

a) ಬಿಡಿ ಕೆಲಸ ಸಂಖ್ಯೆ 101ರ ಕೆಳಗಿನ ಮಾಹಿತಿಗಳಿಂದ ಒಟ್ಟು ವೆಚ್ಚ ಮತ್ತು ಅಂದಾಜು ಮಾರಾಟ ಬೆಲೆಯನ್ನು ಕಂಡುಹಿಡಿಯಿರಿ.

ನೇರ ಕಚ್ಚಾ ಪದಾರ್ಥಗಳು – ರೂ. 17,600

ನೇರ ಶ್ರಮ ವೆಚ್ಚ – ರೂ. 8,000

ಕಾರ್ಯದ ಮೇಲ್ವೆಚ್ಚವನ್ನು ಪ್ರಧಾನ ವೆಚ್ಚದ ಶೇ. 50ರಂತೆ ಭರಿಸಲಾಗಿದೆ ಹಾಗೂ ಆಡಳಿತ ಮೇಲ್ವೆಚ್ಚಗಳ ಕಾರ್ಯ ವೆಚ್ಚದ ಶೇ. 10ರಂತೆ ಭರಿಸಲಾಗಿದೆ. ಒಟ್ಟು ವೆಚ್ಚದ ಶೇ. 10ರಷ್ಟನ್ನು ಲಾಭವಾಗಿ ಸೇರಿಸಲಾಗಿದೆ.

b) ಮಧು ಕಂಪನಿಯು ಉತ್ಪನ್ನವನ್ನು ತಯಾರಿಸುತ್ತದೆ. ವಸ್ತುವಿನ ಪ್ರಕ್ರಿಯೆ-1ರಲ್ಲಿ 5,000 ಕೆ.ಜಿ. ಕಚ್ಚಾ ವಸ್ತುಗಳನ್ನು ಒಂದು ಕೆ.ಜಿ.ಗೆ ರೂ. 12 ರಂತೆ ಒದಗಿಸಲಾಗಿದೆ. ಕಾರ್ಮಿಕ ವೆಚ್ಚವು ರೂ. 6,000ವಾಗಿದ್ದು, ಉತ್ಪಾದನಾ ಮೇಲ್ವೆಚ್ಚ ರೂ. 3,000 ಆಗಿರುತ್ತದೆ. ಸಾಮಾನ್ಯ ನಷ್ಟವು ಶೇ. 5ರಷ್ಟು ಅಂದಾಜು ಮಾಡಿದ್ದು ಅದನ್ನು ಒಂದು ಕೆ.ಜಿ.ಗೆ 3ರಂತೆ ಮಾರಾಟ ಮಾಡಲಾಗಿದೆ. ನೈಜ ಉತ್ಪಾದನೆಯು ಪ್ರಕ್ರಿಯೆಯಲ್ಲಿ 1,860 ಕೆ.ಜಿ.ಗಳಷ್ಟಿರುತ್ತದೆ. ಉತ್ಪಾದನೆ ಪ್ರಕ್ರಿಯೆ-1ರ ಖಾತೆಯನ್ನು ತಯಾರಿಸಿರಿ ಮತ್ತು ಅಸಾಮಾನ್ಯ ನಷ್ಟದ ಮೌಲ್ಯವನ್ನು ಕಂಡುಹಿಡಿಯಿರಿ.

---

SRI BHAGAWAN MAHAVEER JAIN COLLEGE
KGF - 563 122